**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-141/2021 **DW**-3

**ದಿಃ 19.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ ಎಂ ಎಚ್ ವಕೀಲರಿಂದಃ**

ನನ್ನ ತಂದೆ ಹೆಸರು ಬೀಮಪ್ಪ ಎಂದರೆ ಸರಿ. ಬೀಮಪ್ಪ ಎಂದರೆ ಪ್ರತಿವಾದಿಯರು ಮತ್ತು ವಾದಿಯ ತಾಯಿಯ ಅಣ್ಣ ಎಂದರೆ ಸರಿ. ಪ್ರತಿವಾದಿಯರು ನನಗೆ ಮಾವಂದಿರಾಗಬೇಕು. ನ್ಯಾಯಾಲಯದಿಂದ ಸಾಕ್ಷಿ ನುಡಿಯಲು ನಿಮಗೆ ನೋಟೀಸು ಬಂದಿತ್ತಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಕ್ಷಿ ಹೇಳಲು ನಿಮ್ಮನ್ನು ನ್ಯಾಯಾಲಯಕ್ಕೆ ಯಾರು ಕರೆದುಕೊಂಡು ಬಂದರು ಎಂದರೆ ಸಾಕ್ಷಿ 2 ನೇ ಪ್ರತಿವಾದಿ ಎನ್ನುತ್ತಾರೆ. ನನ್ನ ಹೆಂಡತಿ ಹೆಸರು ಯಲ್ಲವ್ವ. ಅವರು ಉಗ್ನಿಕೇರಿ ನಿವಾಸಿ. ಈಗ ನನಗೆ 60 ವರ್ಷ ವಯಸ್ಸು. ಈ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮ್ಮ ವಯಸ್ಸನ ಬಗ್ಗೆ ದಾಖಲೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಉಳವಪ್ಪ ಮನೆತನದ ಆಸ್ತಿಗಳ ಬಗ್ಗೆ ದಾಖಲೆ ಎನೂ ನೋಡಿದ್ದೀರಿ ಎಂದರೆ ಸಾಕ್ಷಿ ಉತಾರ ನೋಡಿರುತ್ತೇನೆ ಎನ್ನುತ್ತಾರೆ. ಉಳ್ಳವಪ್ಪನಿಗೆ ಇಬ್ಬರು ಹೆಂಡತಿಯರು. ಅವರ ಹೆಸರು ಕಲ್ಲವ್ವ ಮತ್ತು ಗೌರಮ್ಮ ಎನ್ನುತ್ತಾರೆ. ಗೌರಮ್ಮ ದೊಡ್ಡವಳು. ಆ ಮನೆತನದ ಬಗ್ಗೆ ನನಗೆ ಎನೂ ಗೊತ್ತಿಲ್ಲದಿದ್ದರೂ 2 ನೇ ಪ್ರತಿವಾದಿ ಮಾತು ಕೇಳಿ ಸುಳ್ಳು ಹೇಳಲು ಬಂದಿರುತ್ತೇನೆಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ಉಳವಪ್ಪ ಹಾಗೂ ಅವರ ಹೆಂಡತಿಯರ ಮತ್ತು ಮಕ್ಕಳು ಎಲ್ಲರೂ ಕೂಡಿ ಒಂದೇ ಮನೆಯಲ್ಲಿರುತ್ತಿದ್ದರು ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಯಾರು ಮಾಹಿತಿ ಕೊಟ್ಟಿದ್ದಾರೆಂದರೆ ಸಾಕ್ಷಿ ವಕೀಲರು ಕೊಟ್ಟಿದ್ದಾರೆ ಎನ್ನುತ್ತಾರೆ. ಅವರು ಬರದುಕೊಟ್ಟರು ನಾನು ಸಹಿ ಮಾಡಿರುತ್ತೇನೆಂದರೆ ಸಾಕ್ಷಿ ಒದಿ ಸಹಿ ಮಾಡಿರುತ್ತೇನೆ ಎನ್ನುತ್ತಾರೆ. ಅದರಲ್ಲಿ ಎನು ಬರೆದಿದೆ ಎಂಬುದನ್ನು ತಿಳಿದುಕೊಂಡಿದ್ದಿರಾ ಎಂದರೆ ಸಾಕ್ಷಿ ವಕೀಲರು ಓದಿ ಹೇಳಿದರು ನಾನು ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎನ್ನುತ್ತಾರೆ. ನಾನು ಗಾಮನಗಟ್ಟಿ ಗ್ರಾಮದಲ್ಲಿರುತ್ತೇನೆ. 1998 ರಲ್ಲಿ ನನ್ನ ವಯಸ್ಸು 25 ವರ್ಷ ವಯಸ್ಸು ಇರಬಹುದು ಎನ್ನುತ್ತಾರೆ. ನನ್ನ ತಂದೆಯವರು ಗಾಮನಗಟ್ಟಿಯಲ್ಲಿ ಇರುತ್ತಿದ್ದರು ಎಂದರೆ ಸರಿ. ಉಳವಪ್ಪ ಮೃತ್ಯುಪತ್ರ ಮಾಡಿರುತ್ತಾನೆಂದು ಹೇಳಿದ್ದು ಅದಕ್ಕೆ

ನಾನು ಸಹಿ ಹಾಕಿರುತ್ತೇನೆಂದು ಹೇಳಿದ್ದು ಆ ಸಮಯಲ್ಲಿ ಯಾರಾರು ಇದ್ದರೇಂದರೆ ಸಾಕ್ಷಿ ಕುಲಕರ್ಣಿ ವಕೀಲರು, ಉಳವಪ್ಪ ಹಾಗೂ ಶಂಕ್ರಪ್ಪ ಮೆಣಸಿಂಡಿ, ಮಹದೇವಪ್ಪ ಗುರಣ್ಣವರು ಇದ್ದರು ಎನ್ನುತ್ತಾರೆ. ಆ ಸಮಯದಲ್ಲಿ ಏನು ಹೇಳಿದರು ಎಂದರೆ ಸಾಕ್ಷಿ ಉಳವಪ್ಪ ಇವರು ಮೃತ್ಯು ಪತ್ರ ಬರೆಸಲು ಹೇಳಿದರು ಅದನ್ನು ಬರೆದ ನಂತರ ವಕೀಲರು ಒದಿ ಹೇಳಿದರು ನಂತರ ನಾವು ಸಾಕ್ಷಿದಾರರಾಗಿ ಸಹಿ ಮಾಡಿದೆವು ಎನ್ನುತ್ತಾರೆ. ನೀವೇನಾದರೂ ಮೃತ್ಯು ಪತ್ರ ಒದಿ ತಿಳಿದುಕೊಂಡಿರಾ ಎಂದರೆ ಸಾಕ್ಷಿ ವಕೀಲರು ಓದಿ ಹೇಳಿದರು ನಾವು ಅದು ಪಕ್ಕಾ ಇದೆ ಎಂದು ತಿಳಿದುಕೊಂಡೆವು ಎನ್ನುತ್ತಾರೆ. ಕಲ್ಲವ್ವ ಹಾಗೂ ಅವರ ಮಕ್ಕಳು ಆ ಸಮಯದಲ್ಲಿ ಅದೇ ಮನೆಯಲ್ಲಿದ್ದರೆಂದರೆ ಸರಿ. ಅವರಿಗೇ ಮೂರು ಮಂದಿ ಗಂಡು ಮಕ್ಕಳು ಹಾಗೂ ಆರು ಮಂದಿ ಹೆಣ್ಣು ಮಕ್ಕಳೆಂದರೆ ಸರಿ. ದಿನಾಂಕಃ25.01.1998 ರಂದುಉಳವಪ್ಪ ಮೃತ್ಯುಪತ್ರ ಮಾಡಿರುತ್ತಾನೆಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿದ ಎಲ್ಲವೂ ಸುಳ್ಳು ಎಂದರೆ ಸಾಕ್ಷಿ ಸತ್ಯ ಇದೆ ಎನ್ನುತ್ತಾರೆ. ಪ್ರತಿವಾದಿಯರು ಹಾಗೂ ನಾವು ಈ ಸುಳ್ಳನ್ನು ಸೃಷ್ಟಿ ಮಾಡಿ ಸಾಕ್ಷಿ ಹೇಳಲು ಬಂದಿರುತ್ತೇನೆಂದರೆ ಸರಿಯಲ್ಲ. ಯಾವದೇ ರೀತಿಯ ಕಾಗದ ಆಗಿಲ್ಲ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮಾವನವರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ನಾನು ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**